# ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.

## ಓ.ಎಸ್.ನಂ. 106/2016.

**ಡಿ ಡಬ್ಲ್ಯೂಃ 1**

**ದಿನಾಂಕಃ 06-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ಮತ್ತು 4ನೇ ಪ್ರತಿವಾದಿಯರ ಪರ ಶ್ರೀ ಎಂ.ಬಿ.ಹೆಚ್. ವಕೀಲರಿಂದಃ**

ನಾನು ಬಿ.ಎಸ್ಸಿ ವರೆಗೆ ಓದಿರುತ್ತೇನೆ. ವಾದಿ ಮಾಡಿದ ದಾವೆ ಬಗ್ಗೆ ಮತ್ತು 3 ಮತ್ತು 4ನೇ ಪ್ರತಿವಾದಿಯರು ಹಾಕಿದ ತಕರಾರಿನ ಬಗ್ಗೆ ನನಗೆ ಮಾಹಿತಿ ಇದೆ. ದಾವಾ ಆಸ್ತಿ 6 ರಿಂದ 8 ಆಸ್ತಿಗಳು ನಮ್ಮ ಅಜ್ಜ ಮುರಿಗೆಪ್ಪ ಶೆಟ್ಟರವರಿಂದ ಬಂದಂತಹ ಆಸ್ತಿಗಳು ಎಂದರೆ ಸರಿ. ಮುರಿಗೆಪ್ಪರವರಿಗೆ 3 ಜನ ಗಂಡು ಮಕ್ಕಳು ಅವರೆಂದರೆ- ಹುಚ್ಚಪ್ಪ, ಕುರುವತ್ತೆಪ್ಪ ಮತ್ತು ಶಂಭುಲಿಂಗಪ್ಪ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಅಜ್ಜ 28.02.1974ನೇ ಸಾಲಿನಲ್ಲಿ ಮಾಡಿದ ವಾಟ್ನಿ ಪ್ರಕಾರ ಬಂದಿರುತ್ತದೆ ಎಂದರೆ ಸರಿ. 1974 ನೇ ಸಾಲಿನಲ್ಲಿ ಆದ ವಾಟ್ನಿ ಪ್ರಕಾರ ನನಗೂ ಮತ್ತು ನನ್ನ ತಮ್ಮನಿಗೆ ನೇರವಾಗಿ ಬಂದಿರುತ್ತವೆ ಎಂದರೆ ಸರಿ. ನಮ್ಮ ಅಜ್ಜನಿಂದ ನೇರವಾಗಿ ನಮ್ಮ ಖಾತೆಗೆ ಬದಲಾವಣೆ ಆಗಿವೆ ಎಂದರೆ ಸರಿ. ನಮ್ಮ ತಂದೆಯ ಹೆಸರಿನಲ್ಲಿ ಯಾವುದೇ ಖಾತಾ ಬದಲಾವಣೆ ಆಗಿಲ್ಲ ಎಂದರೆ ಸರಿ. 1974 ನೇ ಸಾಲಿನ ವಾಟ್ನಿ ಬಗ್ಗೆ ನಮ್ಮ ಅಕ್ಕ ತಂಗಿಯರಿಗೆ ಗೊತ್ತಿದೆ ಎಂದರೆ ಸರಿ. 1974 ರ ವಾಟ್ನಿ ಪ್ರಕಾರ ಡ-4893 ಮಂಜೂರಾಗಿದೆ ಎಂದರೆ ಸರಿ. ಡ-4893 ನ್ನು ಇಲ್ಲಿಯವರೆಗೆ ನಾವಾಗಲಿ ಅಥವಾ ನಮ್ಮ ಸಹೋದರಿಯರಾಗಲಿ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ.

ಸರ್ವೆ ನಂ.332/5, 332/7, 332/3 ಆಸ್ತಿಗಳನ್ನು ನಮ್ಮ ಮನೆತನದ ಅಡಚಣೆಗಾಗಿ ಮತ್ತು ಬ್ಯಾಂಕಿನ ಸಾಲ ತೀರಿಸಲು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಪ್ರತಿವಾದಿ ನಂ.3 ಮತ್ತು 4 ನೇ ದವರಿಗೆ ನಾವು ಸದರಿ ಆಸ್ತಿ ಮಾರಾಟ ಮಾಡಿದ್ದೇವೆ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಯವರು ಅವರಿಗೆ ಮಾರಾಟ ಮಾಡುವ ಕಾಲಕ್ಕೆ ಅವರಿಂದ ಹಣ ಪಡೆದು ಕರ್ನಾಟಕ ಬ್ಯಾಂಕಿನ ಸಾಲವನ್ನು ತೀರಿಸಿ ಕ್ಲಿಯರೆನ್ಸ ಪತ್ರ ಪಡೆದಿರುತ್ತೇವೆ ಎಂದರೆ ಸರಿ. ಖರೀದಿ ಹಿಡಿದಾಗಿನಿಂದ ಅಂದರೆ 2004 ನೇ ಸಾಲಿನಿಂದ ಇವತ್ತಿನವರೆಗೂ ಪ್ರತಿವಾದಿ 3 ಮತ್ತು 4 ನೇ ದವರು ಮೇಲೆ ಹೇಳಿದ ಆಸ್ತಿಗಳ ಮೇಲೆ ಕಬ್ಜಾ ಹೊಂದಿದ್ದಾರೆ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಯರ ಹೆಸರಿಗೆ ಆದ ಮಂಜೂರಾದ ಡ ವನ್ನು ನಾವಾಗಲಿ ಅಥವಾ ವಾದಿಯರಾಗಲಿ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ. ಪ್ರತಿವಾದಿ ನಂ.3 ಮತ್ತು 4 ನೇದವರು ಖರೀದಿ ಮಾಡಿದ ಮೂರು ಆಸ್ತಿಗಳ ಮೇಲೆ ವಾದಿಯರಿಗೆ ಅಥವಾ ನಮಗೆ ಆಗಲಿ ಯಾವುದೇ ಹಕ್ಕು ಹಿತಾಸಕ್ತಿ ಹಿಸ್ಸೆ ಇರುವುದಿಲ್ಲ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಯರು ಯೋಗ್ಯ ಬೆಲೆ ಕೊಟ್ಟು ಮೂರು ಆಸ್ತಿಗಳನ್ನು ಖರೀದಿ ಮಾಡಿ ಕಾನೂನು ರೀತಿ ಖರೀದಿದಾರರು ಇರುತ್ತಾರೆ ಎಂದರೆ ಸರಿ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.